ತುಮಕೂರು, ಚಿತ್ರದುರ್ಗ, ದಾವಣಗೆರೆಯಿಂದ ಪ್ರಕಟಿತ

ಐ.ಎನ್.ಎಸ್.ಸದಸ್ಯತ್ವದ ದಿನಪತ್ರಿಕೆ

ಪ್ರಜಾ ಪ್ರಗತಿ

ಪ್ರಜಾ ಪ್ರಗತಿ
ಚಂದಾ ವಿವರ

ಬಿಡಿ ಪ್ರತಿ	– ರೂ. 1-50/–
ಮಾಸಿಕ	– ರೂ. 45/–
ಅಂಚೆ ಮೂಲಕ ಮಾಸಿಕ	– ರೂ. 50/–
ವಾರ್ಷಿಕ	– ರೂ. 540/–
ಅಂಚೆ ಮೂಲಕ ವಾರ್ಷಿಕ	– ರೂ. 600/–

ಶಿರಾಗೇಟ್‌ನಲ್ಲಿ ಪ್ರೊಫೆಷನಲ್ ಕೊರಿಯರ್ ಶಾಖೆ ಪ್ರಾರಂಭ

ತುಮಕೂರಿನ ಶಿರಾಗೇಟ್‌ನಲ್ಲಿ ಶಿರಾಗೇಟ್ ಆಸ್ಪತ್ರೆ ಪಕ್ಕದ ಶಿವಗಂಗಾ ಬಿಲ್ಡಿಂಗ್‌ನಲ್ಲಿ ಪ್ರೊಫೆಷನಲ್ ಕೊರಿಯರ್ ಶಾಖೆಯನ್ನು ಪ್ರಾರಂಭಿಸಲಾಗಿದೆ.

ಸಂಪರ್ಕಿಸಿ

98805 40995, 98805 48218

ತುಮಕೂರು / *Tumkur.* web:prajapragathi.co.in ಸಂಪಾದಕ : ಎಸ್. ನಾಗಣ್ಣ

e-mail : prajapragathi1@yahoo .co.in / prajapragathi1@rediffmail.com

ಸಂಪುಟ : 38 ***ಸಂಚಿಕೆ 16*** *ಕೆಎ/ಎಸ್‌ಕೆ/ಟಿಎಂಆರ್-365 / 2009-11* *KAR KAN/1988/2925* **ದಿನಾಂಕ 10 ಫೆಬ್ರವರಿ 2010 ಬುಧವಾರ** *ಫೋನ್:- 2278198 / 2257588 /* *ಫ್ಯಾಕ್ಸ್ : 2273793* *ಬೆಲೆ : ರೂ. 1.50*

ತಿಪ್ಪಣ್ಣ: ಮೇಲ್ಮನೆಗೆ ನೇಮಕ ಸಂಭವ

ಬೆಂಗಳೂರು

ಜೆಡಿಎಸ್ ಪಕ್ಷದ ಮೇಲ್ಮನೆ ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ಬಿಜೆಪಿಗೆ ಸೇರ್ಪಡೆಯಾದ ಎನ್.ತಿಪ್ಪಣ್ಣ ಅವರನ್ನು ಬಿಜೆಪಿಯಿಂದ ಮೇಲ್ಮನೆಗೆ ನಾಮಕರಣ ಮಾಡಲು ಸರ್ಕಾರ ಚಿಂತನೆ ನಡೆಸಿದೆ.

ರಾಜ್ಯದ ವಿ.ವಿ.ಗಳಲ್ಲಿ ಏಕರೂಪಿ ಕಾನೂನಿಗೆ ಶಿಫಾರಸ್ಸು

ಬೆಂಗಳೂರು

ರಾಜ್ಯದ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಏಕ ರೂಪದ ಕಾನೂನನ್ನು ಜಾರಿಗೆ ತರುವ ದೃಷ್ಟಿಯಿಂದ ಕರ್ನಾಟಕ ವಿಶ್ವವಿದ್ಯಾಲಯಗಳ ಕಾಯಿದೆಗೆ ತಿದ್ದುಪಡಿಮಾಡುವಂತೆ ಉನ್ನತ ಶಿಕ್ಷಣ ಸಮಿತಿ ಸರ್ಕಾರಕ್ಕೆ ಶಿಫಾರಸ್ಸು ಮಾಡಿದೆ.

ಸಮಿತಿಯ ಅಧ್ಯಕ್ಷ ಪ್ರೊ. ಎನ್. ಆರ್. ಶೆಟ್ಟಿ ಸರ್ಕಾರಕ್ಕೆ ವರದಿ ನೀಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ವಿಶ್ವವಿದ್ಯಾಲಯಗಳ ಶಿಕ್ಷಣ, ಕಾನೂನು ಮತ್ತು ನಿಯಮಾವಳಿಗಳು ಬೇರೆ ಬೇರೆಯಾಗಿದ್ದು, ಇವುಗಳಿಂದ ವಿದ್ಯಾರ್ಥಿಗಳಿಗೆ ತೊಂದರೆ ಉಂಟಾಗುತ್ತಿದೆ. ಇದರ ನಿವಾರಣೆಗೆ ಏಕ ರೂಪದ ಕಾನೂನು ಜಾರಿಗೆ ತರುವುದು ಅಗತ್ಯ. ಈಗಿರುವ ವಿಶ್ವವಿದ್ಯಾಲಯಗಳನ್ನು ಮೇಲ್ದರ್ಜೆಗೇರಿಸುವ ಅಗತ್ಯ ವಿದ್ದು, ಕೆಲವು ನಿಯಮಗಳನ್ನು ಏಕ ರೂಪದಲ್ಲಿ ಜಾರಿಗೆ ತರುವಂತೆ ಶಿಫಾರಸ್ಸು ಮಾಡಿರುವುದಾಗಿ ಹೇಳಿದರು.

ಸೆನೆಟ್ ಮರುಸ್ಥಾಪನೆ: 2000ನೇ ಇಸವಿಯಲ್ಲಿ ರಾಜ್ಯ ವಿಶ್ವವಿದ್ಯಾಲಯಗಳ ಕಾನೂನನ್ನು ಜಾರಿಗೆ ತಂದು ಸೆನೆಟ್‌ನ್ನು ರದ್ದುಮಾಡಿರುವುದು ಸರಿಯಲ್ಲ. ಏಕರೂಪದ ವಿಶ್ವವಿದ್ಯಾಲಯಗಳ ಕಾನೂನು ಜಾರಿಗೆ ತಂದು ಸೆನೆಟ್‌ಅನ್ನು ಮರುಸ್ಥಾಪನೆ ಮಾಡ ಬೇಕೆಂದು ಸಮಿತಿ ಮಹತ್ವದ ಶಿಫಾರಸ್ಸು ಮಾಡಿದೆ.

ಅಕಾಡೆಮಿ ಕೌನ್ಸಿಲ್ ಮತ್ತು ಸಿಂಡಿಕೇಟ್ ಮೇಲೆ ಸೆನೆಟ್ ಉನ್ನತ ಸಂಸ್ಥೆಯಾಗಿ ಕಾರ್ಯನಿರ್ವಹಿಸುವಂತೆ ಸಲಹೆಮಾಡಿರುವ ಸಮಿತಿ 50 ರಿಂದ 55 ಸದಸ್ಯರ ಸೆನೆಟ್ ಸ್ಥಾಪನೆ ಮಾಡಬೇಕು ಎಂದು ಹೇಳಿದೆ.

ಸೆನೆಟ್‌ಗೆ ವಿದ್ಯಾರ್ಥಿ ವಿಭಾಗದಿಂದ ಪ್ರತಿನಿಧಿ, ನೌಕರರ ವರ್ಗದಿಂದ ಪ್ರತಿನಿಧಿ ಸೇರಿದಂತೆ ವಿವಿಧ ಬೋಧನಾ ವಿಭಾಗಗಳಿಂದ ಪ್ರತಿನಿಧಿಗಳನ್ನು ಚುನಾವಣೆ ಮೂಲಕ ನೇಮಕ ಮಾಡಿ ಕಳುಹಿಸುವುದು ಹಾಗೂ ರಾಜ್ಯ ಸರ್ಕಾರದಿಂದ ಒಬ್ಬ ನಾಮ ನಿರ್ದೇಶಿತ ಸದಸ್ಯರನ್ನು ಸೂಚಿಸು ವಂತೆ ತಿಳಿಸಲಾಗಿದೆ. ಸೆನೆಟ್ ಮರು ಸ್ಥಾಪನೆಯಿಂದ ಶಿಕ್ಷಣದ ಗುಣಮಟ್ಟದ ಬಗ್ಗೆ ಹಾಗೂ ವಿಶ್ವ ವಿದ್ಯಾಲಯಗಳ ಆಡಳಿತ ಕಾರ್ಯ ವೈಖರಿ ಚುರುಕುಗೊಳಿಸಲು ಸಹಾಯವಾಗು ತ್ತದೆ ಎಂದು ಎಂದು ಎನ್. ಆರ್. ಶೆಟ್ಟಿ ಹೇಳಿದರು.

ವಿಶ್ವ ವಿದ್ಯಾಲಯಗಳ ವ್ಯಾಪ್ತಿಯ ಕಾಲೇಜುಗಳ ಶಿಕ್ಷಣದ ಗುಣ ಮಟ್ಟ ಅಳೆಯಲು ಸ್ಥಳೀಯ ನಿರ್ವಹಣಾ ಸಮಿತಿಯನ್ನು ಸೆನೆಟ್ ಅಡಿಯಲ್ಲಿ ಕಾರ್ಯನಿರ್ವಹಿಸುವಂತೆ ಹೇಳಲಾಗಿದೆ ಎಂದರು.

ವರದಿ ಸ್ವೀಕರಿಸಿ ಮಾತನಾಡಿದ ಉನ್ನತ ಶಿಕ್ಷಣ ಸಚಿವ ಅರವಿಂದ ಲಿಂಬಾವಳಿ ಒಳ್ಳೆಯ ವರದಿಯನ್ನು ಸಮಿತಿ ನೀಡಿದೆ ಇದನ್ನು ಅಧ್ಯಯನ ಮಾಡಿ ಸಚಿವ ಸಂಪುಟದ ಒಪ್ಪಿಗೆ ಪಡೆದು ಸದನದ ಅನುಮತಿ ನಂತರ ಬಜೆಟ್ ಅಧಿವೇಶನದ ನಂತರ ಜಾರಿಗೆ ತರುವ ಉದ್ದೇಶವಿದೆ ಎಂದರು.

ಅಂಕು-ಡೊಂಕು

ಕೋಟೆಕುಮಾರ್

ಕಳಪೆ ಗುಣದ ಡೆಸ್ಕ್ ಖರೀದಿ ಆರೋಪ....

[redacted]

ಧರ್ಮ ಆಧಾರಿತ ಮೀಸಲಾತಿಗೆ ಅವಕಾಶವಿಲ್ಲ: ಸುರೇಶ್‌ಕುಮಾರ್

ಬೆಂಗಳೂರು

ಧರ್ಮ ಆಧಾರಿತ ಮೀಸಲಾತಿಗೆ ಅವಕಾಶ ನೀಡುವುದಿಲ್ಲ ಎಂದು ಇಂದಿಲ್ಲಿ ಸ್ಪಷ್ಟವಾಗಿ ಹೇಳುವ ಮೂಲಕ ಕಾನೂನು ಮತ್ತು ಸಂಸದೀಯ ಸಚಿವ ಎಸ್.ಸುರೇಶ್‌ಕುಮಾರ್, ರಾಜ್ಯದಲ್ಲಿ ಮುಸ್ಲಿಂರಿಗೆ ಪ್ರತ್ಯೇಕ ಮೀಸಲಾತಿ ಕಲ್ಪಿಸಲು ಸಾಧ್ಯವೇ ಇಲ್ಲ ಎಂದು ಹೇಳಿದ್ದಾರೆ.

ಪಶ್ಚಿಮ ಬಂಗಾಳ ಸರ್ಕಾರ ಮುಸ್ಲಿಂರಿಗೆ ಸರ್ಕಾರಿ ನೇಮಕಾತಿಗಳಲ್ಲಿ ಶೇ 10 ರಷ್ಟು ಮೀಸಲಾತಿ ನೀಡಲು ನಿರ್ಧರಿಸಿರುವ ಕುರಿತು ಪ್ರತಿಕ್ರಿಯಿಸಿದ ಅವರು, ರಾಜ್ಯದಲ್ಲೂ ಅಂತಹ ತೀರ್ಮಾನ ಕೈಗೊಳ್ಳುವ ಕುರಿತು ಯಾವುದೇ ಚಿಂತನೆ ನಡೆಸಿಲ್ಲ ಎಂದು ಸ್ಪಷ್ಟಪಡಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೀಸಲಾತಿ ಏನಿದ್ದರೂ ಆರ್ಥಿಕವಾಗಿ ಹಿಂದುಳಿದವರಿಗೆ ಮಾತ್ರ. ಉಳಿದವರಿಗೆ ಅಂತಹ ಅವಕಾಶ ಇಲ್ಲ ಎಂದು ನುಡಿದರು.

ಬೆಳಗಾವಿ ಜಿಲ್ಲಾ ಪಂಚಾಯ್ತಿಯಲ್ಲಿ ನಿರ್ಣಯಗಳನ್ನು ಮರಾಠಿ ಭಾಷೆಯಲ್ಲಿ ಕೈಗೊಳ್ಳಬೇಕೆಂಬ ಅಲ್ಲಿನ ಜಿಲ್ಲಾ ಪಂಚಾಯತ್‌ನ 8 ಮಂದಿ ಸದಸ್ಯರ ಬೇಡಿಕೆಯನ್ನು ಸ್ಪಷ್ಟವಾಗಿ ತಳ್ಳಿಹಾಕಿದರು.

ಕರ್ನಾಟಕದಲ್ಲಿ ಕನ್ನಡವೇ ಆಡಳಿತ ಭಾಷೆ. ಈ ವಿಚಾರದಲ್ಲಿ ಯಾವುದೇ ರೀತಿಯ ರಾಜಿ ಮಾಡಿಕೊಳ್ಳಲು ಸಾಧ್ಯವಿಲ್ಲ. ಬೆಳಗಾವಿಯಲ್ಲಿ ಮರಾಠಿಗರಿಗೆ ಅವಕಾಶ ನೀಡಿದರೆ ಕೋಲಾರದಲ್ಲಿ ತೆಲುಗು, ತಮಿಳು ಭಾಷೆಯಲ್ಲಿ ನಿರ್ಣಯಕ್ಕೆ ಅನುಮತಿ ಕೊಡಬೇಕು ಎನ್ನುತ್ತಾರೆ. ಮೈಸೂರು ಗಡಿ ಭಾಗದವರು ಮಳಯಾಳಿ ಭಾಷೆಗೆ ಆದ್ಯತೆ ನೀಡಬೇಕೆಂದು ಬೇಡಿಕೆ ಇಡುತ್ತಾರೆ. ಅದಕ್ಕಾಗಿ ಇಂತಹ ಅಸಂಬದ್ಧ ಪ್ರಸ್ತಾಪಗಳಿಗೆ ಮಾನ್ಯತೆ ನೀಡಲು ಸಾಧ್ಯವೇ ಇಲ್ಲ ಎಂದು ನುಡಿದರು.

ರಾಜ್ಯ ವಕೀಲರ ಸಂಘವನ್ನು ತಾವು ಒಡೆಯುತ್ತಿರುವುದಾಗಿ ಕೆಲ ವಕೀಲರು ಮಾಡಿರುವ ಆರೋಪಕ್ಕೆ ಪ್ರತಿಕ್ರಿಯಿಸಿದ ಅವರು, ಅಂತಹ ಆಪಾದನೆಗಳಿಗೆ ಯಾವುದೇ ಆಧಾರವಿಲ್ಲ. ವಕೀಲರ ಸಂಘದ ಐಕ್ಯತೆಗೆ ತಾವು ಶ್ರಮಿಸುತ್ತಿದ್ದು, ಒಡೆಯುವ ಯಾವುದೇ ಉದ್ದೇಶವನ್ನು ಹೊಂದಿಲ್ಲ.

ಈ ಹಿಂದೆ ಹೈಕೋರ್ಟ್ ಆವರಣದಲ್ಲಿ ಘರ್ಷಣೆ ಆದ ಸಂದರ್ಭದಲ್ಲಿ ವಕೀಲರೊಂದಿಗೆ ಸಮಾಲೋಚನೆ ನಡೆಸಿ ಸಮಸ್ಯೆ ಬಗೆಹರಿಸುವ ಕೆಲಸ ಮಾಡಿದ್ದೇನೆ. ಯಾವುದೇ ಕಾರಣಕ್ಕೂ ಒಡೆಯುವ ಕೆಲಸ ಮಾಡಿಲ್ಲ ಎಂದು ಹೇಳಿದರು.

ರಾಜ್ಯದ ಅಡ್ವೋಕೆಟ್ ಜನರಲ್ ಅವರನ್ನು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ಟೀಕಿಸಿದ ಸಂದರ್ಭದಲ್ಲಿ ರಾಜ್ಯವಕೀಲರ ಸಂಘ ಹಾಗೂ ಬಾರ್ ಕೌನ್ಸಿಲ್ ಅಧ್ಯಕ್ಷರೊಂದಿಗೆ ಸಮಾಲೋಚನೆ ನಡೆಸಿದ ನಂತರವೇ ತಾವು ಮೌನ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದು, ಪರಿಸ್ಥಿತಿ ಹೀಗಿರುವಾಗ ವಕೀಲರ ಸಂಘವನ್ನು ಒಡೆಯುವ ಉದ್ದೇಶವಾದರೂ ಎಲ್ಲಿಂದ ಬರಲು ಸಾಧ್ಯ ಎಂದು ಸುರೇಶ್ ಕುಮಾರ್ ಪ್ರತಿಕ್ರಯಿಸಿದರು.

‘ಕನ್ನಡಕ್ಕೆ ಬೇಕು ವಿಮರ್ಶಾ ಮಾನದಂಡ’

ತುಮಕೂರು

‘ಜ್ಞಾನ ವಾಹಿನಿ ಕಲಿಯದವರ ಕಾಮಧೇನು ಆದರೆ ಜ್ಞಾನ ಶಿಸ್ತು ಕಲಿತವರ ಕಸರತ್ತು ಅಂದರಂತೆ ಆಹ್ವಾನ ಮತ್ತು ವಿಸರ್ಜನೆಯೂ ಒಬ್ಬ ಸಹೃದಯನಿಗೆ ಯಾವುದನ್ನು ಸ್ವೀಕರಿಸಬೇಕು, ಯಾವುದನ್ನು ವಿಸರ್ಜಿಸಬೇಕು ಎಂಬುದನ್ನು ತಿಳಿಸುತ್ತದೆ. ಒಂದು ವಿಮರ್ಶೆಯು ಮೂಲಭೂತವಾಗಿ ವಿಶೇಷವಾಗುವುದು ರೂಪನಿಷ್ಠ ವಿಮರ್ಶೆ ಅಥವಾ ಕೃತಿ ನಿಷ್ಠ ವಿಮರ್ಶೆಯಿಂದಲ್ಲ. ಅದು ಒಳಗೊಂಡಿರುವ ಜನಾಂಗ, ವಸ್ತು ಸ್ಥಿತಿ, ಜನರ ಬಳಕೆಯ ಆಧಾರದಿಂದ ಮಾತ್ರ ಸಾಧ್ಯ’ ಎಂದು ಖ್ಯಾತ ವಿಮರ್ಶಕ ಡಾ|| ಚಂದ್ರಶೇಖರ್ ನಂಗಲಿ ಅವರು ಹೇಳಿದರು.

ಶ್ರೀ ಸಿದ್ದಗಂಗಾ ಕಲಾ, ವಿಜ್ಞಾನ ಮತ್ತು ವಾಣಿಜ್ಯ, ಕಾಲೇಜು ತುಮಕೂರು ಇಲ್ಲಿನ ಕನ್ನಡ ವಿಭಾಗದ ಬಿ.ಎಂ.ಶ್ರೀ ಕನ್ನಡ ಸಂಘದ ಆಶ್ರಯದಲ್ಲಿ ನಡೆದ ಸ್ವಾತಂತ್ರ್ಯೋತ್ತರ ವಿಮರ್ಶಾ ಚಿಂತನೆಯ ಪ್ರಸ್ಥಾನಗಳು ಎಂಬ ರಾಜ್ಯ ಮಟ್ಟದ ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಮಾತನಾಡಿದರು.

ವಿಚಾರ ಸಂಕಿರಣವನ್ನು ಉದ್ಘಾಟಿಸಿದ ಕಾಲೇಜಿನ ಪ್ರಾಂಶುಪಾಲರಾದ ಡಾ|| ಹೆಚ್.ಎಸ್. ನಿರಂಜನಾರಾಧ್ಯ ಈ ವಿಚಾರ ಸಂಕಿರಣವನ್ನು ಕುರಿತು ಸ್ವಾತಂತ್ರ್ಯಾನಂತರದ ಸಾಹಿತ್ಯ ಬೆಳವಣಿಗೆಯಲ್ಲಿ ವೈವಿಧ್ಯತೆಯಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಪ್ರಭಾವದ ಜೊತೆಗೆ ಮುದ್ರಣದ ಭರಾಟೆಯಲ್ಲಿ ಸಾಹಿತ್ಯ ಸೃಷ್ಠಿ ಸಾಗಿದೆ. ಸಾಹಿತ್ಯ ಕೃತಿಗಳ ವಿಮರ್ಶೆ ನಿರಂತರವಾಗಿರಬೇಕು ಹಾಗೂ ವಿಚಾರ ಸಂಘರ್ಷ ಮತ್ತು ವಿಚಾರ ಮಂಥನ ಇಂದಿನ ದಿನಗಳಲ್ಲಿ ಅತ್ಯವಶ್ಯಕ ಎಂದು ಹೇಳಿದರು.

ಡಾ|| ನಟರಾಜ ಬೂದಾಳ್ ಅವರು ದೇಸಿ ಕಾವ್ಯ ಮೀಮಾಂಸೆಯ ಪ್ರಸ್ತುತತೆಯನ್ನು ವಿವರಿಸುತ್ತಾ, ಕನ್ನಡಕ್ಕೆ ಅದರದ್ದೇ ಆದ ಕಾವ್ಯ ಮೀಮಾಂಸೆಯ ಅಗತ್ಯವಿದೆ, ಯಾವ ವಚನವೂ ಆನಂದಕ್ಕೋಸ್ಕರ ಕಟ್ಟಿದ್ದಲ್ಲ, ಅದು ಅನುಭವದ ಅಭಿವ್ಯಕ್ತಿಯ ಪ್ರತೀಕ ಮತ್ತು ಎಲ್ಲಾ

(2ನೇ ಪುಟಕ್ಕೆ)

ದೇವಾಲಯಗಳು ಮಾನಸಿಕ ನೆಮ್ಮದಿ ನೀಡುತ್ತವೆ

ಗುಬ್ಬಿ

ಪ್ರಸ್ತುತ ಸಾಮಾಜಿಕ ಬದುಕಿನಲ್ಲಿ ಹತ್ತು ಹಲವು ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿಕೊಂಡು ಬೇಸತ್ತ ಮನಸ್ಸಿಗೆ ಚಿತ್ರರಂಗ ಮತ್ತು ದೇವಾಲಯಗಳು ಮಾನಸಿಕ ನೆಮ್ಮದಿ ನೀಡುತ್ತವೆ ಎಂದು ಶಾಸಕ ಎಸ್.ಆರ್. ಶ್ರೀನಿವಾಸ ತಿಳಿಸಿದರು.

ಅವರು ತಾಲ್ಲೂಕಿನ ಜಿ. ಅರಿವೇಸಂದ್ರ ಗ್ರಾಮದಲ್ಲಿ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯದ ಉತ್ಸವ ಮೂರ್ತಿ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ದೇವರು–ದೇವಾಲಯ ಮನಸ್ಸಿನಲ್ಲಿ ನೆಮ್ಮದಿ ನೀಡುವುದರ ಜೊತೆಗೆ ಗ್ರಾಮದಲ್ಲಿ ಸಮಾನತೆ ಮತ್ತು ಸಾಮರಸ್ಯ ಮೂಡಿಸಲಿವೆ ಎಂದ ಅವರು ಗ್ರಾಮೀಣ ಧಾರ್ಮಿಕ ಆಚರಣೆಗಳ ಮೂಲಕ ನಮ್ಮ ಸನಾತನ ಧಾರ್ಮಿಕ ಪರಂಪರೆಗಳನ್ನು ಉಳಿಸಿ ಬೆಳೆಸುವತ್ತಾ ಪ್ರಾಯೋಗಿಕ ಪ್ರಯತ್ನ ಮಾಡಬೇ

(3ನೇ ಪುಟಕ್ಕೆ)

ಮಹಾಲಕ್ಷ್ಮೀ ಅಮ್ಮನವರಿಗೆ ವಿಶೇಷ ಅಭಿಷೇಕ

ತುಮಕೂರು

ನಗರದ ಮಹಾಲಕ್ಷ್ಮೀ ದೇವಸ್ಥಾನ ಟ್ರಸ್ಟ್ ವತಿಯಿಂದ ಟಿಜಿಎಂಸಿ ಬ್ಯಾಂಕ್ ಆವರಣದಲ್ಲಿ ಫೆ.12 ರಂದು ಶಿವರಾತ್ರಿ ಪ್ರಯುಕ್ತ ಮಹಾಲಕ್ಷ್ಮೀ ಅಮ್ಮನವರಿಗೆ ವಿಶೇಷ ಪೂಜೆ ಅಭಿಷೇಕವನ್ನು ಏರ್ಪಡಿಸಲಾಗಿದೆ ಹಾಗೂ ಶಿವರಾತ್ರಿ ಮಹಾತ್ಮೆಯನ್ನು ತಿಳಿಸುವ ದೃಶ್ಯಾವಳಿಯನ್ನು ಆಯೋಜಿಸಲಾಗಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕಾಗಿ ಟ್ರಸ್ಟ್‌ನ ಅಧ್ಯಕ್ಷರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಜಾಪ್ರಭುತ್ವದ ನಾಲ್ಕು ಅಂಗಗಳು ಅಂಗವಿಕಲ

ಬೆಂಗಳೂರು

ಪತ್ರಿಕಾ ರಂಗ ಸೇರಿದಂತೆ ರಾಜ್ಯದ ನಾಲ್ಕೂ ಅಂಗಗಳು ಅಂಗ ವಿಕಲವಾಗಿವೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಮುಖ್ಯ ಮಂತ್ರಿ ಚಂದ್ರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ 55 ಕಾನೂನು ಪುಸ್ತಕಗಳ ಲೋಕಾರ್ಪಣೆ ಮಾಡುವ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರಜಾತಂತ್ರ ವ್ಯವಸ್ಥೆಗೆ ಆಧಾರ ಸ್ಥಂಭವಾಗಿರಬೇಕಾದ ನಾಲ್ಕೂ ಅಂಗಗಳು ಅಂಗವಿಕಲವಾಗಿರುವುದು ಆತಂಕಕಾರಿ ಎಂದರು. ಬೆಳಗಾವಿಯಲ್ಲಿ ಮರಾಠಿಗರಿಗೆ ಸೀಮಾ ಪರಿಷತ್ ಸಭೆ ನಡೆಸಲು ಅನು ಮತಿ ನೀಡಿದ ಸರ್ಕಾರದ ಧೋರಣೆ ಯನ್ನು ಬಹಿರಂಗವಾಗಿ ಖಂಡಿಸಿದ ಅವರು, ರಾಜ್ಯದ ನೆಲ. ಸಂಸ್ಕೃತಿಯ ಮೇಲೆ ದಬ್ಬಾಳಿಕೆ ನಡೆಸುವ ಇಂತಹ ಸಮಾ ವೇಶಗಳಿಗೆ ಅವಕಾಶ ನೀಡಬಾರದು.

ಇಂತಹ ಬೆಳವಣಿಗೆಯಿಂದ ರಾಜ್ಯದಲ್ಲಿ ಉದ್ವಿಗ್ನ ವಾತಾವರಣಕ್ಕೆ ಆಸ್ಪದ ಮಾಡಿಕೊಟ್ಟಂತಾಗುತ್ತದೆ. ಸಮಾವೇಶದಲ್ಲಿ ಪ್ರಚೋದನಕಾರಿ ಭಾಷಣ ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಅಲ್ಲದೇ ಕನ್ನಡ ಪರ ಹೋರಾಟಗಾರರ ಮೇಲೆ ಹೂಡಿರುವ ಮೊಕದ್ದಮೆಗಳನ್ನು ಹಿಂದಕ್ಕೆ ಪಡೆಯಬೇಕೆಂದು ಒತ್ತಾಯಿಸಿದರು.

ರೇಷ್ಮೆ ಅಭಿವೃದ್ಧಿಪಡಿಸಲು ಶ್ರಮಿಸುವೆ: ಸಚಿವ

ಕುಣಿಗಲ್

ರಾಗಿ, ಮೆಕ್ಕೆಜೋಳ, ಕೊಬ್ಬರಿ & ಕಬ್ಬು ಬೆಳೆಗಳಿಗೆ ಸರ್ಕಾರ ಬೆಂಬಲ ಬೆಲೆ ನೀಡಿ ರೈತರಿಗೆ ನೆರವಾಗಿರುವಂತೆ ರೇಷ್ಮೆ ಸ್ವತಃ ಬೆಳೆದು ರೈತರ ನೋವು ಅರಿತಿರುವ ನಾನು ರೇಷ್ಮೆ ಬೆಳೆಗೆ ಹೆಚ್ಚಿನ ಆದ್ಯತೆ ನೀಡಿ ಅಭಿವೃದ್ಧಿಪಡಿಸಲು ಶ್ರಮಿಸುವೆ ಎಂದು ರೇಷ್ಮೆ ಹಾಗೂ ಸಣ್ಣ ಕೈಗಾರಿಕೆ ಸಚಿವ ವೆಂಕಟರಮಣಪ್ಪ ತಿಳಿಸಿದರು.

ತಾಲ್ಲೂಕಿನ ಬಿಳಿ ದೇವಾಲಯ ಸರಕಾರಿ ರೇಷ್ಮೆ ಕೃಷಿ ಕ್ಷೇತ್ರದಲ್ಲಿ ನಡೆದ ರೇಷ್ಮೆ ಕೃಷಿ ಕಾರ್ಯಾಗಾರ, ಇಲಾಖಾ ಸವಲತ್ತುಗಳ ಸಹಾಯಧನ ಚೆಕ್‌ಗಳ ವಿತರಣೆ ಹಾಗೂ ರೇಷ್ಮೆ ಬೆಳೆಗಾರರಿಂದ ಅಭಿನಂದನಾ ಸಮಾರಂಭದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದರು.

ರಾಗಿ, ಮೆಕ್ಕೆ ಜೋಳ, ಕೊಬ್ಬರಿ ಮತ್ತು ಕಬ್ಬು ಬೆಳೆಗಳಿಗೆ ಸರಕಾರ ಬೆಂಬಲ ಬೆಲೆ ನೀಡಿ ರೈತರಿಗೆ ನೆರವಾಗಿದೆ. ಇದರಂತೆ ಸೂಕ್ಷ್ಮ ಬೆಳೆಯಾದ ರೇಷ್ಮೆ ಗೂಡಿಗೂ ಬೆಂಬಲ ಬೆಲೆ ನೀಡಲು ಮುಖ್ಯಮಂತ್ರಿಗಳ ಜೊತೆ ಚರ್ಚಿಸಲಾಗಿದ್ದು, ಶೀಘ್ರದಲ್ಲಿ ಜಾರಿಗೆ ಬರಲಿದೆ ಎಂದರು. ಇದರ ಜೊತೆಗೆ ಹುಳು ಮನೆಗೂ ಅನುದಾನವನ್ನು ಹೆಚ್ಚಿಸುವುದು ಹಾಗೂ ಹಾಲಿ ದೊರೆಯುತ್ತಿರುವ ಸರ್ಕಾರದ ಸವಲತ್ತುಗಳನ್ನು ಇನ್ನಷ್ಟು ಹೆಚ್ಚಿಸಿ ರೇಷ್ಮೆ ಕೃಷಿಗೆ ಉತ್ತೇಜನ ನೀಡಲಾಗುವುದು ಎಂದರು.

ರೇಷ್ಮೆ ಇಲಾಖೆ ಕುಂಠಿತಗೊಳ್ಳಲು ರಿಯಲ್ ಎಸ್ಟೇಟ್ ಹಾವಳಿ ಕಾರಣವಾಗಿದ್ದು, ಬೆಂಗಳೂರಿನ ಸುತ್ತಮುತ್ತಲ ರೈತರು ಜಮೀನುಗಳನ್ನು ಮಾರಾಟ ಮಾಡಿಕೊಂಡು ರೇಷ್ಮೆ ಬೆಳೆಯುವುದನ್ನು ಕೈಬಿಟ್ಟಿದ್ದಾರೆ. ಈ ಸಂಬಂಧ ಮೈಸೂರು ಜಿಲ್ಲೆಯ ಕೆಲವು ಭಾಗಗಳಲ್ಲಿ ರೇಷ್ಮೆ ಕೃಷಿಗೆ ಅನುಕೂಲಕರವಾದ ವಾತಾವರಣವಿದ್ದು ಇಲ್ಲಿನ ರೈತರು ಬೆಳೆಯುತ್ತಿದ್ದ ತಂಬಾಕು ಬೆಳೆಯನ್ನು ಕೈಬಿಟ್ಟಿದ್ದಾರೆ ಈ ಪ್ರದೇಶವನ್ನು ಬಿತ್ತನೆ ವಲಯಕ್ಕೆ ಸೇರಿಸಿಕೊಂಡು ರೇಷ್ಮೆ ವಲಯವನ್ನು ವಿಸ್ತರಿಸಲು ಸರ್ಕಾರ ಚಿಂತನೆ ನಡೆಸಿದೆ ಎಂದರು.

ಅಧಿಕಾರಿಗಳ ನಿಯೋಜನೆ ಇಲ್ಲ, ರೇಷ್ಮೆ ಇಲಾಖೆಯ ನೌಕರರನ್ನು ಬೇರೆ ಇಲಾಖೆಗೆ ನಿಯೋಜಿಸಲಾಗುವುದು ಎಂದು ಹಬ್ಬಿರುವ ಸುದ್ದಿ ಸುಳ್ಳು ಎಂದ ಅವರು ಕೊಡಗು ಮತ್ತು ಉತ್ತರ ಕರ್ನಾಟಕ ಕೆಲವು ಕಡೆ ಕೆಲಸವಿಲ್ಲದೇ ನೌಕರರಿಗೆ ಸಂಬಳ ನೀಡಲಾಗುತ್ತಿದೆ ಇಂತಹ ನೌಕರರನ್ನು ನಮ್ಮ ಇಲಾಖೆಯಲ್ಲೇ ಅಗತ್ಯವಿರುವ ಕಡೆ ವರ್ಗಾವಣೆ ಮಾಡಿ ಕೆಲಸ ನೀಡಲಾಗುವುದು. ಹೆಚ್ಚುವರಿಯಾದವರನ್ನು ಮಾತ್ರ ಬೇರೆ ಇಲಾಖೆಗೆ ನಿಯೋಜಿಸಲಾಗುವುದು ಎಂದು ಸ್ಪಷ್ಟಪಡಿಸಿದ ಅವರು ಹಾಲಿ ಇಲಾಖೆಯಲ್ಲಿ ಒಂದು ಸಾವಿರ ಹುದ್ದೆಗಳನ್ನು ಹೊಸದಾಗಿ ತುಂಬಲು ಪ್ರಸ್ತಾವನೆ ಕಳಿಸಲಾಗಿದೆ ಎಂದರು. ಹಣಕಾಸು ಇಲಾಖೆಯವರು ಕೆಲಸವಿಲ್ಲದೇ ಸಂಬಳ ನೀಡಲಾಗುತ್ತಿರುವುದನ್ನು ಪ್ರಶ್ನಿಸಿದ್ದರಿಂದ ಈ ಸಮಸ್ಯೆ ಉದ್ಭವಿಸಿದೆ ಎಂದು ಅವರು ತಿಳಿಸಿದರು.

ಶಾಸಕ ಬಿ.ಬಿ. ರಾಮಸ್ವಾಮಿಗೌಡ ಮಾತನಾಡಿ ಸುಮಾರು ವರ್ಷಗಳಿಂದ ಜಿಲ್ಲೆಯವರೇ ಆದ ನಾಯಕರುಗಳು ರೇಷ್ಮೆ ಸಚಿವರಾಗಿದ್ದರೂ ಈ ಭಾಗದ

(4ನೇ ಪುಟಕ್ಕೆ)

ವೇತನ ಬಟವಾಡೆ ನಿರ್ಲಕ್ಷ್ಯ: ನ್ಯಾಯಾಲಯದ ಆದೇಶ

ತುಮಕೂರು ಡಿಡಿಪಿಐ ಕಛೇರಿ ಜಪ್ತಿ



ತುಮಕೂರು

ಖಾಸಗಿ ಪ್ರೌಢ ಶಾಲೆಯ ಸಹ ಶಿಕ್ಷಕರೊಬ್ಬರಿಗೆ ವೇತನ ಬಟವಾಡೆಯಲ್ಲಿ ನಿರ್ಲಕ್ಷ್ಯ ಮಾಡಿದ ನಡವಳಿಕೆಗಾಗಿ ನ್ಯಾಯಾಲಯವು ತುಮಕೂರು ಡಿ.ಡಿ.ಪಿ.ಐ. ಕಚೇರಿ ಹಾಗೂ ನಗರದ ಖಾಸಗಿ ಶಿಕ್ಷಣ ಸಂಸ್ಥೆ ಯೊಂದಕ್ಕೆ ಜಪ್ತಿ ಆದೇಶ ಹೊರಡಿಸಿದೆ.

ಈ ಆದೇಶದನ್ವಯ ಮಂಗಳವಾರದಂದು ಡಿ.ಡಿ.ಪಿ.ಐ. ಕಚೇರಿಯ ಪೀಠೋಪಕರಣಗಳನ್ನು ಜಪ್ತಿ ಮಾಡಿ ಶಿಕ್ಷಕ ಟಿ.ಹೆಚ್. ರಾಮಚಂದ್ರ ಅವರ ವಶಕ್ಕೆ ಕೊಡಿಸಲಾಯಿತು.

ಕುಣಿಗಲ್ ತಾಲ್ಲೂಕು ಮಾರುತಿ ಪ್ರೌಢಶಾಲೆ ಜಾಣಗೆರೆ ಎಂಬ ಗ್ರಾಮದಲ್ಲಿದೆ. ಇದು ಮೂಲತಃ ಪರಿಶಿಷ್ಟ ಜಾತಿಯ ಆಡಳಿತ ವರ್ಗಕ್ಕೆ ಸೇರಿತ್ತು. ಇದನ್ನು 1987ರಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಯೊಂದು ತೆಗೆದುಕೊಂಡಿತು.

ಅಲ್ಲಿ ಪ್ರಭಾರ ಮುಖ್ಯ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದ ಟಿ.ಹೆಚ್.ರಾಮಚಂದ್ರ ಅವರಿಗೆ ಕೆಲಸ ಮಾಡಲು ಅವಕಾಶ ನೀಡದೆ ವಿಳಂಬ, ನಿರ್ಲಕ್ಷ್ಯ ಧೋರಣೆ ಅನುಸರಿಸಿದ ಪರಿಣಾಮವಾಗಿ ಜಪ್ತಿ ಆದೇಶ ಜಾರಿಯಾಗಿದೆ.

ಸದರಿ ಶಿಕ್ಷಕ ರಾಮಚಂದ್ರ 1985-86ರಲ್ಲಿ ಮಾರುತಿ ಶಿಕ್ಷಣ ಸಂಸ್ಥೆ ನಡೆಸುತ್ತಿದ್ದ ಜಾಣಗೆರೆಯ ಮಾರುತಿ ಪ್ರೌಢಶಾಲೆಗೆ ಶಿಕ್ಷಕರಾಗಿ ಆಯ್ಕೆಯಾಗಿದ್ದರು. ಅವರ ಹಿರಿತನದ ಆದಾರದ ಮೇಲೆ ಅವರನ್ನು ಪ್ರಭಾರ ಮುಖ್ಯ ಶಿಕ್ಷಕರನ್ನಾಗಿ ನೇಮಿಸಲಾಯಿತು. 7-8-1986 ರಂದು ಇವರ ಸೇವೆ ಖಾಯಂ ಆಯಿತು.

ಶಿಕ್ಷಕ ರಾಮಚಂದ್ರ ಅವರನ್ನು ಕೆಲಸಕ್ಕೆ ನೇಮಕ ಮಾಡಿಕೊಳ್ಳದೆ, ಬೇರೆ ಶಿಕ್ಷಕರ ಮೂಲಕ ಪ್ರೌಢ ಶಾಲೆಯನ್ನು ನಡೆಸಲು ಖಾಸಗಿ ಸಂಸ್ಥೆಯವರು ಮುಂದಾದರು.

ಈ ಅನ್ಯಾಯದ ಬಗ್ಗೆ ಶಿಕ್ಷಕ ರಾಮಚಂದ್ರ ಅವರು 1999ರಲ್ಲಿ ಜಿಲ್ಲಾ ನ್ಯಾಯಾಲಯದ ಮೊರೆ ಹೊಕ್ಕರು. ನ್ಯಾಯಾಲಯ ಖಾಸಗಿ ಶಿಕ್ಷಣ ಸಂಸ್ಥೆಗೆ ಯಾವುದೇ ಹೊಸ ಶಿಕ್ಷಕರನ್ನು ತೆಗೆದುಕೊಳ್ಳದಂತೆ 1990ರಲ್ಲಿ ಆದೇಶಿಸಿತು.

(6ನೇ ಪುಟಕ್ಕೆ)

‘ಹೊರ ರಾಜ್ಯಗಳಿಂದ ವಿದ್ಯುತ್ ಖರೀದಿಸಿ’

ಬೆಂಗಳೂರು

ಹೊರರಾಜ್ಯಗಳಿಂದ ವಿದ್ಯುತ್ ಖರೀದಿಸಿಯಾದರೂ ರಾಜ್ಯ ಎದುರಿಸುತ್ತಿರುವ ವಿದ್ಯುತ್ ಸಮಸ್ಯೆಯನ್ನು ಪರಿಹರಿಸುವಂತೆ ಭಾರತೀಯ ಜನತಾ ಪಕ್ಷ ಸರ್ಕಾರವನ್ನು ಒತ್ತಾಯಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಭಾಜಪ ವಕ್ತಾರ ಸಿ.ಟಿ.ರವಿ, ಕರ್ನಾಟಕದ ವಿದ್ಯುತ್ ವ್ಯವಸ್ಥೆ ಸಮರ್ಪಕವಾಗಿಲ್ಲ ಎಂದು ಒಪ್ಪಿಕೊಂಡರಲ್ಲದೇ ಇದನ್ನು ಗಂಭೀರವಾಗಿ ಪರಿಗಣಿಸಿ ಕೊರತೆಯಿರುವ ವಿದ್ಯುತ್‌ನ್ನು ಹೊರರಾಜ್ಯಗಳಿಂದ ಖರೀದಿಸಿ ಪೂರೈಸಬೇಕು ಎಂದರು.

ಶಾಲಾ ಮಕ್ಕಳಿಗೆ ಪರೀಕ್ಷಾ ಕಾಲದ ವ್ಯಾಸಂಗಕ್ಕಾಗಿ ಸಮರ್ಪಕ ವಿದ್ಯುತ್‌ನ್ನು ಪೂರೈಸಬೇಕು ಎಂದ ಅವರು, ಯಾವ ಕಾರಣಕ್ಕೂ ಈ ವಿಷಯದಲ್ಲಿ ಸರ್ಕಾರ ಹಿಂಜರಿಯಬಾರದು ಎಂದು ನುಡಿದರು.

ಕಾಂಗ್ರೆಸ್ ಹಾಗೂ ಜೆಡಿಎಸ್ ಸರ್ಕಾರಗಳು ಇದ್ದ ಕಾಲದಲ್ಲಿ ಸಮರ್ಪಕವಾಗಿ ವಿದ್ಯುತ್ ಪೂರೈಸಿದ್ದರೆ ಇಂದಿನ ಸಮಸ್ಯೆ ಇರುತ್ತಿರಲಿಲ್ಲ. ಆದರೆ ಅವರು ಈ ವಿಷಯದಲ್ಲಿ ಜವಾಬ್ದಾರಿಯುತವಾಗಿ ನಡೆದುಕೊಳ್ಳದೇ ಇರುವ ಕಾರಣದಿಂದಾಗಿ ಸದ್ಯದ ಸಮಸ್ಯೆ ಎದುರಾಗಿದೆ ಎಂದು ಟೀಕಿಸಿದರು.

ಬಿಬಿಎಂಪಿ ಚುನಾವಣೆಯನ್ನು ಆದಷ್ಟೂ ಬೇಗ ನಡೆಸಬೇಕು ಎಂಬುದು ಪಕ್ಷ ಹಾಗೂ ಕಾರ್ಯಕರ್ತರ ಬಯಕೆ. ಈ ವಿಷಯದಲ್ಲಿ ಇರುವ ಗೊಂದಲವನ್ನು ಪರಿಹರಿಸಿ ಚುನಾವಣೆ ನಡೆಸಲು ಸರ್ಕಾರ ಹಾಗೂ ಚುನಾವಣಾ ಆಯೋಗ ಕ್ರಮಕೈಗೊಳ್ಳಬೇಕು ಎಂದು ಆಗ್ರಹ ಪಡಿಸಿದರು.

ಮೀಸಲಾತಿ ಸಮರ್ಪಕವಾಗಿಲ್ಲ ಎಂಬ ಕಾರಣಕ್ಕಾಗಿ ನ್ಯಾಯಾಲಯ ಒಂದು ಆದೇಶ ನೀಡಿದೆ. ಹೀಗಾಗಿ ಮೀಸಲಾತಿಯನ್ನು ಸರಿಪಡಿಸಿ ಆದಷ್ಟು ಬೇಗ ಚುನಾವಣೆ ನಡೆಸಲು ಕ್ರಮ ಕೈಗೊಳ್ಳಬೇಕು ಎಂಬುದು ತಮ್ಮ ಒತ್ತಾಯ ಎಂದು ನುಡಿದರು.

ಮಧ್ಯಪ್ರದೇಶದ ಇಂದೋರ್‌ನಲ್ಲಿ ಫೆಬ್ರವರಿ 17 ಹಾಗೂ 18 ರಂದು ಬಿಜೆಪಿ ರಾಷ್ಟ್ರೀಯ ಪರಿಷತ್ ಸಭೆ ನಡೆಯಲಿದ್ದು ಅದರಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತವರ ಸಂಪುಟ ಸಹೋದ್ಯೋಗಿಗಳು, ಸಂಸದರು, ಶಾಸಕರು, ಪಕ್ಷದ ಜಿಲ್ಲಾಧ್ಯಕ್ಷರುಗಳು ಸೇರಿದಂತೆ ಸುಮಾರು ನಾನೂರು ಮಂದಿ ಪಾಲ್ಗೊಳ್ಳಲಿದ್ದಾರೆ ಎಂದು ಇದೇ ಸಂಧರ್ಭದಲ್ಲಿ ನುಡಿದರು.

ಬೆಲೆ ಏರಿಕೆ,ಆರ್ಥಿಕ ನಿರ್ವಹಣೆ ವಿಷಯದಲ್ಲಿ ಕೇಂದ್ರ ಸರ್ಕಾರದ ವೈಫಲ್ಯ, ಭಯೋತ್ಪಾದನೆ ಸೇರಿದಂತೆ ಹಲವು ವಿಷಯಗಳ ಬಗ್ಗೆ ಪಕ್ಷದ ರಾಷ್ಟ್ರೀಯ ಪರಿಷತ್ ಸಭೆಯಲ್ಲಿ ಚರ್ಚೆ ನಡೆಯಲಿದೆ ಎಂದು ಅವರು ಸ್ಪಷ್ಟ ಪಡಿಸಿದರು.

ಇದೇ ಸಂಧರ್ಭದಲ್ಲಿ ಅಂತ್ಯೋದಯ ಅಭಿಯಾನ ಎಂಬ ಹೊಸ ಯೋಜನೆಯನ್ನು ಪ್ರಕಟಿಸಲಿದ್ದು ಚುನಾಯಿತ ಪ್ರತಿನಿಧಿಗಳು ಅಭಿವೃದ್ಧಿ ಆಧಾರಿತ ರಾಜಕಾರಣದ ದಿಕ್ಕಿನತ್ತ ಹೊರಳಲು ಇದು ಸಹಾಯಕವಾಗಲಿದೆ. ಇದೇ ರೀತಿ ಫೆಬ್ರವರಿ 11 ರಂದು ದೆಹಲಿಯಲ್ಲಿ ಯುವ ಸಂಸದರು ಮತ್ತು ಪದಾಧಿಕಾರಿಗಳಿಗೆ ಈ ಕುರಿತು ತರಬೇತಿ ನೀಡಲಾಗುವುದು ಎಂದು ಅವರು ಸ್ಪಷ್ಟ ಪಡಿಸಿದರು.

ಅಗತ್ಯ ವಸ್ತುಗಳ ಬೆಲೆ ಏರಿಕೆ ಸಂಬಂಧ ರಾಜ್ಯದಲ್ಲಿ ಹೋರಾಟ ನಡೆಸುವುದರ ಬಗ್ಗೆ ರೂಪು ರೇಷೆಯನ್ನು ತಯಾರಿಸಿ ಪಕ್ಷದ ರಾಜ್ಯಾಧ್ಯಕ್ಷರು ಮುಂದಿನ ಹೆಜ್ಜೆ ಇಡುವ ಬಗ್ಗೆ ಪ್ರಕಟಿಸಲಿದ್ದಾರೆ

(6ನೇ ಪುಟಕ್ಕೆ)

ಉದ್ಯೋಗಖಾತ್ರಿ ವಿಳಂಬ: ತಾ.ಪಂ. ಕಛೇರಿಗೆ ಬೀಗ ಜಡಿದು ಪ್ರತಿಭಟನೆ

ಶಿರಾ

ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಉದ್ಯೋಗ ಖಾತ್ರಿ ಯೋಜನೆಯ ಹಣ ಮಂಜೂರಾತಿ ವಿಳಂಬವನ್ನು ಖಂಡಿಸಿ ತಾ.ಪಂ. ಅಧ್ಯಕ್ಷರು ಮತ್ತು ಸದಸ್ಯರಾದಿಯಾಗಿ ಅನೇಕ ರೈತರು ತಾ.ಪಂ.ಕಛೇರಿಗೆ ಬೀಗ ಜಡಿದು ಪ್ರತಿಭಟಿಸಿದ ಘಟನೆ ಮಂಗಳವಾರ ಬೆಳಿಗ್ಗೆ ನಡೆಯಿತು.

ಜಿಲ್ಲೆಯ 9 ತಾಲ್ಲೂಕುಗಳಲ್ಲಿ ಎನ್.ಆರ್.ಇ.ಜಿ.ಯೋಜನೆಯ ಕಾಮಗಾರಿಗಳನ್ನು ಕಂಪ್ಯೂಟರ್‌ಗಳಲ್ಲಿ ಫೀಡ್ ಮಾಡಲಾಗುತ್ತಿದೆ ಆದರೆ, ಶಿರಾ ತಾಲ್ಲೂಕಿನಲ್ಲಿ ಮಾತ್ರ ಕಂಪ್ಯೂಟರ್‌ನಲ್ಲಿ ಕಾಮಗಾರಿಗಳನ್ನು ಫೀಡ್ ಮಾಡದಂತೆ ಲಾಕ್ ಮಾಡಲಾಗಿದ್ದು ಇದರಿಂದಾಗಿ ರೈತರಿಗೆ ತೀವ್ರ ರೀತಿಯ ಸಮಸ್ಯೆಗಳುಂಟಾಗಿವೆ ಎಂದು ಪ್ರತಿಭಟನಾಕಾರರು ಆರೋಪಿಸಿದರು.

ಯೋಜನೆಯ ಕಾಮಗಾರಿಗಳನ್ನು ಫೀಡ್ ಮಾಡದೆ ವಿನಾ ಕಾರಣ ವಿಳಂಭವಾಗಲು ತಾ.ಪಂ.ಕಾರ್ಯನಿರ್ವಹಣಾಧಿಕಾರಿಗಳೇ ನೇರ ಕಾರಣರಾಗಿದ್ದು ಜಿಲ್ಲಾಧಿಕಾರಿಗಳು ಮತ್ತು ಜಿ.ಪಂ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸ್ಥಳಕ್ಕೆ ಬಂದು ಭರವಸೆ ನೀಡುವತನಕ ಪ್ರತಿಭಟನೆ ಮುಂದುವರಿಸುವುದಾಗಿ ಪ್ರತಿಭಟನಾಕಾರರು ತಿಳಿಸಿದರು. ತಾ.ಪಂ.ಪ್ರಭಾರ ಅಧ್ಯಕ್ಷ ಜುಂಜಯ್ಯ ಮಾತನಾಡಿ ತಾ.ಪಂ. ಇ.ಓ. ಮಂಜುನಾಥ್‌ರವರು ಸದಸ್ಯರ ಯಾವುದೇ ಸಲಹೆ ಸೂಚನೆಗಳಿಗೆ ಕವಡೆ ಕಾಸಿನ ಕಿಮ್ಮತ್ತು ನೀಡುತ್ತಿಲ್ಲ, ಫೆ:8 ರಂದು ಸರ್ವ ಸದಸ್ಯರ ಸಭೆ ಕರೆಯಲು ಅಧ್ಯಕ್ಷನಾದ ನಾನೇ ಅವರಿಗೆ ಸೂಚನೆ ನೀಡಿದ್ದರೂ ಅದನ್ನು ಕಡೆಗಣಿಸಿದ್ದಾರೆ. ಮನಸೋ ಇಚ್ಛೆ ವರ್ತಿಸುತ್ತಿರುವ ಅವರ ವಿರುದ್ದ ಕೂಡಲೇ ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿದರು.

ಜಿ.ಪಂ. ಸದಸ್ಯರ ಭೇಟಿ: ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಕಳ್ಳಂಬೆಳ್ಳ ಜಿ.ಪಂ. ಸದಸ್ಯ ಮುದಿಮಡು ರಂಗಸ್ವಾಮಯ್ಯ, ಚಿಕ್ಕನಹಳ್ಳಿ ಜಿ.ಪಂ. ಕ್ಷೇತ್ರದ ಸದಸ್ಯೆ ಶೋಭಾನಾಗರಾಜ್ ಭೇಟಿ ನೀಡಿ ಸದಸ್ಯರ ಮನವೊಲಿಸುವ ಪ್ರಯತ್ನ ಮಾಡಿ ಈ ನಿಟ್ಟಿನಲ್ಲಿ ಸಫಲರಾದರು. ಬುಧವಾರ ಬೆಳಿಗ್ಗೆಯಿಂದ ಕಾಮಗಾರಿಗಳ ಪ್ರಗತಿಯನ್ನು ಕಂಪ್ಯೂಟರ್‌ನಲ್ಲಿ ಫೀಡ್ ಮಾಡಿಸುವ ಮೂಲಕ ಹಣ ಬಿಡುಗಡೆಗೊಳಿಸುವುದಾಗಿ ತಾ.ಪಂ.ಕಾರ್ಯನಿರ್ವಾಹಕ ಅಧಿಕಾರಿಗಳು ಭರವಸೆ ನೀಡಿದ ನಂತರ ಪ್ರತಿಭಟನೆಯನ್ನು ವಾಪಸ್ ಪಡೆಯಲಾಯಿತು.

ತಾ.ಪಂ. ಮಾಜಿ ಅಧ್ಯಕ್ಷರಾದ ಎಸ್.ಆರ್.ಗೌಡ, ಕೆ.ಕಾಳಪ್ಪ, ತಾ.ಪಂ. ಸದಸ್ಯರಾದ ಪಿ.ಬಿ.ನರಸಿಂಹಯ್ಯ, ರಾಮಣ್ಣ, ರಾಮಕೃಷ್ಣ, ಲಕ್ಷ್ಮೀದೇವಮ್ಮ, ಸುದರ್ಶನ್ ಸೇರಿದಂತೆ ಅನೇಕ ಸದಸ್ಯರು ಹಾಜರಿದ್ದರು.

ADMISSIONS OPEN FOR CBSE CURRICULUM

PRE-PRIMARY - M1, M2, M3 & 1st to 6th Std.

New classes will be added each year up to standard 12

Bus Facility provided

ಭಾನುವಾರ ಮತ್ತು ರಜೆ ದಿನಗಳಲ್ಲೂ ಅರ್ಜಿಗಳನ್ನು ಪಡೆಯಬಹುದು

FOR ADMISSION & DETAILS CONTACT :

PRUDENCE INTERNATIONAL SCHOOL

Hirehalli, Next to T.V.S. Electronics, Tumkur 572 168

Tel. : 0816-2243726/27, Mob. : 94480 49895, 98453 32818